aglasem.com

FOR AP CLASS 10 EXAM PREPARATION

AP Class 10 2027 Model Paper · Kannada First Language

EXAM	YEAR	TYPE	SUBJECT
AP Class 10	2027	Model Paper	Kannada First Language

2026– 2027

ಪ್ರಶ್ನಾನುರೂಪ ವಿಶ್ಲೇಷಣೆ ಪಟ್ಟಿಕೆ – ಕನ್ನಡ ಪ್ರಥಮ ಭಾಷೆ

ಕ್ರಮ ಸಂಖ್ಯೆ:	ವಿದ್ಯಾ ಪ್ರಮಾಣಗಳು	ಪ್ರ.ಸಂ.	ಪ್ರಶ್ನೆಗಳ ರೂಪ	ಅಂಕಗಳು		ಪ್ರಶ್ನೆಗಳ ಸ್ವಭಾವ
1	ಅವಗಾಹನೆ	1	ಪ್ರತಿ ಪದಾರ್ಥ	8	ವ್ಯಾಸರೂಪ	ಪದ್ಯ ಪಾಠಗಳಲ್ಲಿ ಸಣ್ಣಪದ್ಯಗಳು ಭಾವಗೀತೆ,
		2	ಪರಿಚಿತ ಗದ್ಯ ಪ್ರಶ್ನೆಗಳು	8	ವ್ಯಾಸರೂಪ	ಗದ್ಯ ಪಾಠದಲ್ಲಿ ಮುಖ್ಯವಾದ ಪ್ಯಾರಾಗಳು ಉತ್ತರಗಳು ಪೂರ್ಣವಾಕ್ಯದಲ್ಲಿರಬೇಕು
		3	ಪಠ್ಯ ಪೂರಕ ಸಂಘಟನಾ ಕ್ರಮ	8	ವ್ಯಾಸರೂಪ	ಸಂಘಟನಾ (ಸರಿಯಾದ) ಕ್ರಮದಲ್ಲಿ ಬರೆಯುವುದು.
	ಸೂಚನೆ:– ಗದ್ಯ , ಪದ್ಯ ಪಾಠಗಳು ಪ್ರಾಧಾನ್ಯತೆ ಸಮಾನವಿರಬೇಕೆಂಬ ಲಕ್ಷ್ಯ ದಿಂದ ಅಪರಿಚಿತ ಗದ್ಯವನ್ನು ತೆಗೆದು "ವ್ಯಕ್ತೀಕರಣ – ಸೃಜನಾತ್ಮಕತೆ" ಯಲ್ಲಿ ಗದ್ಯ ಭಾಗದಿಂದ ವ್ಯಾಸ ರೂಪ ಪ್ರಶ್ನೆ ಕೊಡಲಾಗಿದೆ.					
2.	ವ್ಯಕ್ತೀಕರಣ ಸೃಜನಾತ್ಮಕತೆ	4	ಕವಿ ಪರಿಚಯ	4	ಲಘುರೂಪ	ಪದ್ಯ ಭಾಗದಿಂದ ಮಾತ್ರ ಕೊಡಬೇಕು
		5	ಗದ್ಯ ಭಾಗ	4	ಲಘುರೂಪ	ಗದ್ಯ ಭಾಗದಿಂದ ಮಾತ್ರ ಕೊಡಬೇಕು
		6	ಪಠ್ಯ ಪೂರಕ	4	ಲಘುರೂಪ	ಪಠ್ಯ ಪೂರಕದಿಂದ ಮಾತ್ರ ಕೊಡಬೇಕು .
		7 (ಅ)	ಅರ್ಥಗುರ್ತಿಸಿರಿ	1	ಅತಿ ಲಘು	ಪಾಠ್ಯಾಂಶಗಳಲ್ಲಿ
		(ಆ)	ಗುರ್ತಿಸಿರಿ	2 1		
		8 (ಅ)	ಸಮಾನಾರ್ಥ ಗುರ್ತಿಸಿ	1	ಅತಿ ಲಘು	ಪಾಠಗಳಿಂದ
		(ಆ)	ಪದಗಳು ಗುರ್ತಿಸಿರಿ	2 1		ಪದ್ಯಗಳಿಂದ
		9 (ಅ)	ತತ್ಸಮ ಗುರ್ತಿಸಿರಿ	1	ಅತಿ ಲಘು	ಪಾಠ ಗಳಿಂದ
		(ಆ)	ತದ್ಭವ ಗುರ್ತಿಸಿರಿ	2 1		ಪದ್ಯಗಳಿಂದ
		10 (ಅ)	ನಾನಾರ್ಥಗಳು	2	ಅತಿ ಲಘು	ಪದ್ಯದಿಂದ ಗದ್ಯ ಭಾಗದಿಂದ
		(ಆ)	ಗುರ್ತಿಸಿರಿ			
ಕ್ರಮ ಸಂಖ್ಯೆ:	ವಿದ್ಯಾ ಪ್ರಮಾಣಗಳು	ಪ್ರ.ಸಂ.	ಪ್ರಶ್ನೆಗಳ ರೂಪ	ಅಂಕಗಳು		ಪ್ರಶ್ನೆಗಳ ಸ್ವಭಾವ
3.	ಭಾಷಾಂಶಗಳು	11 (ಅ)	ದ್ವಿರುಕ್ತಿ ಜೋಡು ನುಡಿ ಗುರ್ತಿಸಿರಿ	1	ಅತಿಲಘು ರೂಪ	ಪಾಠ್ಯ ಭಾಗದಿಂದ ಕೊಡಬೇಕು
		(ಆ)		2 1		
		12	ಬಿಡಿಸಿ ಬರೆಯಿರಿ ಗುರ್ತಿಸಿರಿ	1	ಲಕ್ಷ್ಯಾತ್ಮಕ	ಪಾಠ್ಯಂಶ ದಿಂದ

		13	ಕೂಡಿಸಿ ಗುರ್ತಿಸಿರಿ	1	ಲಕ್ಷ್ಯಾತ್ಮಕ	ಪಾಠ್ಯಾಂಶದಿಂದ
		14	ಸಂಧಿ ಗುರುತಿಸುವುದು	1	ಲಕ್ಷ್ಯಾತ್ಮಕ	ಪಾಠ್ಯಾಂಶದಿಂದ
		15	ವಿಗ್ರಹ ವಾಕ್ಯ	1	ಲಕ್ಷ್ಯಾತ್ಮಕ	ಪಾಠ್ಯಾಂಶದಿಂದ
		16	ಸಮಾಸ ಗುರ್ತಿಸಿ	1	ಲಕ್ಷ್ಯಾತ್ಮಕ	ಪಾಠ್ಯಾಂಶದಿಂದ
		17	ಆಧುನಿಕ ವಚನ ಬರೆಯಿರಿ	1	ಲಕ್ಷ್ಯಾತ್ಮಕ	ಪಾಠ್ಯಾಂಶದಿಂದ
		18	ವಿರುದ್ಧ ವಾಕ್ಯ ಬರೆಯಿರಿ	1	ಲಕ್ಷ್ಯಾತ್ಮಕ	ಪಾಠ್ಯಾಂಶದಿಂದ
		19.	ಸಂಯುಕ್ತ ವಾಕ್ಯ ಬರಿ	1	ಲಕ್ಷ್ಯಾತ್ಮಕ	ಪಾಠ್ಯಾಂಶದಿಂದ
		20	ಮಿಶ್ರ ವಾಕ್ಯ ಬರಿ	1	ಲಕ್ಷಾತ್ಮಕ	ಪಾಠ್ಯಾಂಶ ದಿಂದ ಅಥವಾ ಸ್ವಂತವಾಗಿ
		21	ಕರ್ಮಣಿ ವಾಕ್ಯ ಬರೆಯಿರಿ	1	ಲಕ್ಷಾತ್ಮಕ	ಪಾಠದಲ್ಲಿ ಅಥವಾ ಸ್ವಂತವಾಗಿ
		22	ಅನ್ಯಾದೇಶ ಪದ ಬರೆಯಿರಿ	1	ಲಕ್ಷಾತ್ಮಕ	ಪುಸ್ತಕದಲ್ಲಿರುವ
		23.	ಇದು ಎಂತಹ ವಾಕ್ಯ ಬರಿಯಿರಿ	1	ಲಕ್ಷಾತ್ಮಕ	ಪಾಠ್ಯಾಂಶವಾಗಿ ಸ್ವಂತವಾಗಿ
		24	ಎಂತಹ ವಾಕ್ಯ ಬರಿಯಿರಿ	1	ಲಕ್ಷಾತ್ಮಕ	ಸ್ವಂತ ವಾಗಿ ಅಥವಾ ಪಾಠ್ಯಾಂಶವಾಗಿ
		25	ಕೊಟ್ಟ ವಾಕ್ಯಕ್ಕೆ ಉದಾಹರಣೆ ಬರಿ	1	ಲಕ್ಷಾತ್ಮಕ	ಪಾಠ್ಯಾಂಶವಾಗಿ ಅಥವಾ ಸ್ವಂತ ವಾಗಿ
		26	ವಿಷಯಾತ್ಮಕ	8	ವ್ಯಾಸ	ಪದ್ಯಭಾಗದಿಂದ
		27	ವಿಷಯಾತ್ಮಕ	8	ವ್ಯಾಸರೂಪ	ಗದ್ಯಭಾಗದಿಂದ
		28	ಅಲಂಕಾರ ಗುರ್ತಿಸಿ ಬರೆ	2	ಅತಿ ಲಘು	ಪಾಠ್ಯ ಭಾಗದಿಂದ
		29	ಗುರು ಲಘು ಗುರ್ತಿಸಿ ಬರಿಯಿರಿ.	2	ಅತಿ ಲಘು	ಪದ್ಯ ಭಾಗದಿಂದ
		30	ಸೃಜನಾತ್ಮಕತೆ	8	ವ್ಯಾಸರೂಪ	ಪ್ರಭಂದ ಪತ್ರಗಳು
		31	ವಿಷಯಾತ್ಮಕ	8	ವ್ಯಾಸರೂಪ	ಪೂರಕ ಪಾಠಗಳಿಂದ
		32	ನುಡುಗಟ್ಟು ಗುರ್ತಿಸಿ ಬರೆಯಿರಿ	2	ಅತಿ ಲಘು	ಪಾಠದಲ್ಲಿನ ಇಲ್ಲವೇ ಸ್ವಂತವಾಗಲೀ ಕೊಡಬಹುದು
		33	ನುಡಿಗಟ್ಟು ಸಂದರ್ಭ ಬರಿಯಿರಿ	2	ಅತಿ ಲಘು	ಪಾಠದಲ್ಲಿನ ಇಲ್ಲವೇ ಸ್ವಂತವಾಗಲೀ ಕೊಡಬಹುದು.

10ನೇ ತರಗತಿ ಪ್ರಥಮ ಬಾಷೆ – ಕನ್ನಡ ಬ್ಲೂ ಪ್ರಿಂಟ್ 2026–2027

BLUE PRINT 01K & 02 K

ಕ್ರಮ ಸಂಖ್ಯೆ:	ಪಾಠ್ಯಾಂಶಗಳು	ಅವಗಾಹನೆ 60 ಅಂಕಗಳು				ಸುನ್ನಿತತ್ವ 20 ಅಂಕಗಳು		ಸೃಜನಾತ್ಮಕತೆ 20 ಅಂಕಗಳು		ಮೊತ್ತ 100 ಅಂಕಗಳು			
		ವ್ಯಾಸ	ಲಘು	ಅತಿ ಲಘು	ಲಕ್ಷ್ಯ	ವ್ಯಾಸ	ಅತಿ ಲಘು	ವ್ಯಾಸ	ಅತಿ ಲಘು	ವ್ಯಾಸ	ಲಘು	ಅತಿ ಲಘು	ಲಕ್ಷ್ಯ
1.	ಪದ್ಯಭಾಗ	(8)1	(4)1	–	–	(8)1	–	–	–	(8)2	(4)1	–	–
2.	ಗದ್ಯ ಭಾಗ	(8)1	(4)1	–	–	(8)1	–	–	–	(8)2	(4)1	–	–
3	ಪಠ್ಯ ಪೂರಕ ಅಧ್ಯಯನ	(8)1	(4)1	–	–	–	–	(8)1	–	(8)2	(4)1	–	–
4	ಪದ್ಯ/ಗದ್ಯ ದಿಂದಸೃಜನಾತ್ಮಕ ಪ್ರಶ್ನೆ	–	–	–	–	–	–	(8)1	–	(8)1	–	–	–
5	ಭಾಷಾಂಶಗಳು	–	–	(2)5	(1)14	–	(2)2	–	(2)2	–	–	(2)9	(1)14
	ಮೊತ್ತ	24	12	10	14	16	4	16	4	56	12	18	14
		60				20		20		100			

BLUE PRINT & MODEL PAPERS OF SSC PUBLIC EXAMINATIONS FOR THE ACADEMIC YEAR 2026-27
BY THE DIRECTOR OF GOVERNMENT EXAMINATIONS (SSC BOARD), AP

01 K & 02K

KANNADA (FIRST LAUNGUAGE)

ಕನ್ನಡ(ಪ್ರಥಮ ಭಾಷೆ)

ಮಾದರಿ ಪ್ರಶ್ನೆ ಪತ್ರಿಕೆ–1: 2026–27

ಸಮಯ: 3ಗಂಟೆ 15 ನಿ॥ ಗರಿಷ್ಠ ಅಂಕಗಳು:100

ವಿದ್ಯಾರ್ಥಿಗಳಿಗೆ ಸೂಚನೆಗಳು

1) ಪ್ರಶ್ನೆಪತ್ರಿಕೆಯಲ್ಲಿ ಮೂರು ವಿಭಾಗಗಳು ಇರುತ್ತವೆ
2) ಪ್ರಶ್ನೆಪತ್ರಿಕೆ ಓದುವುದಕ್ಕೆ 15ನಿಮಿಷಗಳು, ಉತ್ತರ ಬರೆಯುದಕ್ಕೆ 3ಗಂಟೆ ಸಮಯ ಇರುತ್ತದೆ
3) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಉತ್ತರ ಪತ್ರಿಕೆಯಲ್ಲಿಯೇ ಬರೆಯಬೇಕು
4) ಉತ್ತರಗಳು ದುಂಡಾಗಿ, ಸ್ಪಷ್ಟವಾಗಿ ಬರಯಬೇಕು

ವಿಭಾಗ– I (60 ಅಂಕಗಳು)

ಅವಗಾಹನೆ

1) ಈ ಕೆಳಗಿನ ಪರಿಚಿತ ಪದ್ಯಗಳಲ್ಲಿ ಒಂದಕ್ಕೆ ಪ್ರತಿಪದರ್ಥ ಬರೆಯಿರಿ 8 ಅಂಕಗಳು

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

(ಅಥವಾ)

ನಿಮಗೆ ಪೊಡೆಮಟ್ಟು ಪೋಪೀ।
ಸಮಕಟ್ಟಂ ಬಂದೆನ ಹಿತರೊಳ್ ಸಂಧಿಯನೇಂ॥
ಸಮಕೊಳಿಸಲೆಂದು ಬಂದೆನೆ।
ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ॥

2) ಕೆಳಗಿನ ಪರಿಚಿತ ಗದ್ಯವನ್ನು ಓದಿ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 8 ಅಂಕಗಳು

ರಾಮಾಯಣ ಮಹಾಕಾವ್ಯವು ಭಾರತೀಯರ ಪವಿತ್ರ ಗ್ರಂಥಗಳಲ್ಲಿ ಒಂದು ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಶಬರಿಯೂ ಒಬ್ಬಳು. ಈಕೆ ಮತಂಗ ಋಷಿಯ ಆಶ್ರಮದಲ್ಲಿದ್ದಳು. ಸೀತಾಪಹರಣದ ಅನಂತರ ಶೋಕ ತಪ್ತರಾದ ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಯಾದ ದನು ಎಂಬವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ.

ಪಶ್ನೆಗಳು
ಅ) ಭಾರತೀಯರ ಪವಿತ್ರ ಗ್ರಂಥ ಯಾವುದು?
ಆ) ಶಬರಿಯು ಯಾರ ಆಶ್ರಮದಲ್ಲಿದ್ದಳು?
ಇ) ಶಬರಿಯ ಗುರಿ ಏನಾಗಿತ್ತು?

ಈ) ರಾಮ ಲಕ್ಷ್ಮಣರು ಯಾರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸಿದರು?

3) ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ 8 ಅಂಕಗಳು

ಅ) ತುಮಕೂರು ಜಿಲ್ಲೆ ತುರುವೇಕೇರೆ ತಾಲೂಕು ಗೊಪ್ಪೇನ ಹಳ್ಳಿ ಇವರ ಜನ್ಮಸ್ಥಳ
ಆ) ಕೆಲವು ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ, ರೈತರಾಗಿ ಸಾವಯವ ಕೃಷಿಯಲ್ಲಿ ತೊಡಗಿಸಿ ಕೊಂಡಿದ್ದಾರೆ
ಇ) ಶ್ರೀ ಚಿದಾನಂದ ಮೂರ್ತಿ ಜಿ.ಎಸ್. ಅವರು 1970ರಲ್ಲಿ ಜನಿಸಿದರು
ಈ) ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಸ್ನಾತಕೋತ್ತರ ಶಿಕ್ಷಣ

ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿರಿ 3*4=12ಅಂಕ

4) 'ವೀರಲವ' ಪದ್ಯಭಾಗದಿಂದ ಲಕ್ಷ್ಮೀಶ ಕವಿಯ ಪರಿಚಯ ಬರೆಯಿರಿ

5) ಹುಲಿಯ ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

6) ಯಾರಿಗೆ ವಸಂತಮುಖ ತೋರಲಿಲ್ಲ?

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 5*2=10ಅಂಕ

7) ಅ) ಹುಲಿಯು **ಘ್ರಾಣೇಂದ್ರಿ**ಯದಿಂದ ವಾಸನೆ ಕಂಡುಹಿಡಿಯಿತು
(ಗೆರೆ ಎಳೆದ ಪದಕ್ಕೆ ಅರ್ಥ ಗುರ್ತಿಸಿರಿ)
ಅ) ಕಿವಿ ಆ) ಮೂಗು ಇ) ನಾಲಿಗೆ ಈ) ಕಣ್ಣು

ಆ) ಎಲ್ಲಾ ಮತಗಳು **ಪಥ**ವನ್ನು ತೋರಿಸುತ್ತವೆ
(ಗೆರೆ ಎಳೆದ ಪದಕ್ಕೆ ಅರ್ಥ ಗುರ್ತಿಸಿ ಬರೆಯಿರಿ)
ಅ) ಮತ ಆ) ದಾರಿ ಇ) ಸುತ ಈ) ಪಂಥ

8) ಅ) ದೀಪಾವಳಿಯಲ್ಲಿ **ಗಗನ**ವು ಪಟಾಕಿಗಳಿಂದ ಪ್ರಕಾಶಿಸುತ್ತದೆ
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಗುರ್ತಿಸಿ ಬರೆಯಿರಿ)
ಅ) ನೆಲ, ಭೂಮಿ ಆ) ಮಣ್ಣು, ಗಗನ ಇ) ಮುಗಿಲು, ಆಕಾಶ ಈ) ಭೂಮಿ, ಗಗನ

ಆ) ಬಸವಣ್ಣನವರು **ಕಾಯಕ**ವೇ ಕೈಲಾಸವೆಂದರು
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಗುರ್ತಿಸಿ ಬರೆಯಿರಿ)
ಅ) ಕೆಲಸ, ಕಸಬು ಆ) ಶರೀರ, ಕೆಲಸ ಇ) ಉದಕ, ಕಸಬು ಈ) ಕಾಯ, ನೀರು

9) ಅ) ರಾಮನ **ಕೀರುತಿ** ಅಜರಾಮರ
(ಗೆರೆ ಎಳೆದ ಪದಕ್ಕೆ ತತ್ಸಮ ಪದ ಬರೆಯಿರಿ)
ಅ) ಕೀತಿ ಆ) ಕೀರ್ತಿ ಇ) ಕೀರು ಈ) ಕೀರ್ತಿ

ಆ) ಶಬರಿಯ **ಭಕ್ತಿ** ರಾಮನಿಗೆ ಮೆಚ್ಚುಗೆಯಾಯಿತು
(ಗೆರೆ ಎಳೆದ ಪದಕ್ಕೆ ತದ್ಭವ ಗುರ್ತಿಸಿ ಬರೆಯಿರಿ)
ಅ) ಬತ್ತಿ ಆ) ಪ್ರೇಮ ಇ) ಬಕುತಿ ಈ) ಗೌರವ

10) ಅ) ಅವಳು ಧರಿಸಿದ **ಓಲೆ** ಬಹಳ ಸುಂದರವಾಗಿತ್ತು
(ಗೆರೆ ಎಳೆದ ಪದಕ್ಕೆ ನಾನರ್ಥಗಳು ಗುರ್ತಿಸಿ ಬರೆಯಿರಿ)
ಅ) ಬಂಗಾರ, ಬೆಳ್ಳಿ ಆ) ಒಲೆ, ಪತ್ರ ಇ) ಪತ್ರ, ಬೆಳ್ಳಿ ಈ) ಪತ್ರ, ಕವಿಯ ಆಭರಣ

ಆ) **ಕಾಡು**ಗಳಲ್ಲಿ ಅನೇಕ ಪ್ರಾಣಿಗಳು ಜೀವಿಸುತ್ತವೆ

(ಗೆರೆ ಎಳೆದ ಪದಕ್ಕೆ ನಾನರ್ಥಗಳು ಗುರ್ತಿಸಿ ಬರೆಯಿರಿ)

ಅ) ಅಡವಿ, ಆನೆ ಆ) ಜಿಂಕೆ, ನೀರು ಇ) ಹುಲಿ, ಕಾಡು ಈ) ಅರಣ್ಯ, ಪೀಡಿಸು

11) ಅ) ಗೀತ ಶಾಲೆಗೆ ಓಡಿ ಓಡಿ ಬಂದಳು

(ಮೇಲಿನ ವಾಕ್ಯದಲ್ಲಿ ದ್ವಿರುಕ್ತಿ ಪದವನ್ನು ಗುರ್ತಿಸಿ ಬರೆಯಿರಿ)

ಅ) ಬಂದಳು ಆ) ಓಡಿ ಓಡಿ ಇ) ಗೀತ ಈ) ಶಾಲೆಗೆ

ಆ) ಮನೆಯಲ್ಲಿ ಮುಂಜಾನೆಯೇ ಕಾಫಿ ಗೀಫಿ ಕುಡಿಯುತ್ತೇವೆ

(ಗೆರೆ ಎಳೆದ ಪದವನ್ನು ಗುರ್ತಿಸಿ ಬರೆಯಿರಿ)

ಅ) ದ್ವಿರುಕ್ತಿ ಆ) ಪ್ರತ್ಯಯ ಇ) ಜೋಡುನುಡಿ ಈ) ಉಕ್ತಿ

ಈ ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 5*1=5 ಅಂಕ

12) ಪೂರ್ವ ದಿಕ್ಕಿನಲ್ಲಿ **ಸೂರ್ಯೋದಯ** ವಾಗುತ್ತದೆ

(ಗೆರೆ ಎಳೆದ ಪದವನ್ನು ಬಿಡಿಸಿ ಗುರ್ತಿಸಿ ಬರೆಯಿರಿ)

ಅ) ಸೂಯ+ಉದಯ ಆ) ಸೂಯೋ+ಉದಯ ಇ) ಸೂರ್ಯ+ಉದಯ ಈ) ಸಯ+ಉದಯ

13) ಕೆಳಗಿನ ಪದಗಳಲ್ಲಿ 'ಗುಣಸಂಧಿ'ಗೆ ಸೇರಿದ ಪದವನ್ನು ಗುರ್ತಿಸಿರಿ

ಅ) ಊರೂರು ಆ) ಕಲೆಯನ್ನು ಇ) ದೇವೇಂದ್ರ ಈ) ಮಳೆಗಾಲ

14) **ಅತ್ಯಂತ** ಪ್ರತಿಭಾವಂತರಿಗೆ ಪ್ರಭುತ್ವ ಪುರಸ್ಕಾರ ಕೊಡುತ್ತದೆ

(ಗೆರೆ ಎಳೆದ ಪದ ಯಾವಸಂಧಿ ಗುರ್ತಿಸಿ ಬರೆಯಿರಿ)

ಅ) ಗುಣಸಂಧಿ ಆ) ಯಣ್‌ಸಂಧಿ ಇ) ಲೋಪಸಂಧಿ ಈ) ವೃದ್ಧಿಸಂಧಿ

15) ಬೆಸಿಗೆಯಲ್ಲಿ **ತಲೆನೋವು** ಜಾಸ್ತಿ ಬರುತ್ತದೆ

(ಗೆರೆ ಎಳೆದ ಪದಕ್ಕೆ ವಿಗ್ರಹ ವಾಕ್ಯ ಗುರ್ತಿಸಿ ಬರೆಯಿರಿ)

ಅ) ಮೈಯಲ್ಲಿ+ನೋವು ಆ) ತೆಲೆ+ಮೇಲೆ ಇ) ನೋವು+ಇಲ್ಲ ಈ) ತಲೆಯಲ್ಲಿ+ನೋವು

16) ಹಂಪಿಯಲ್ಲಿ **ಸಪ್ತಸ್ವರಗಳು** ನುಡಿಸುವ ಸ್ಥಂಬಗಳು ಇವೆ

(ಗೆರೆ ಎಳೆದ ಪದ ಯಾವ ಸಮಾಸ ಗುರ್ತಿಸಿ ಬರೆಯಿರಿ)

ಅ) ಗಮಕ ಸಮಾಸ ಆ) ದ್ವಿಗು ಸಮಾಸ ಇ) ಕರ್ಮಧಾರಯ ಸಮಾಸ ಈ) ದ್ವಂದ್ವ ಸಮಾಸ

ಈ ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 9*1=9 ಅಂಕಗಳು

17) ಅರಸುಗಳ ವಾಜಿಯಂ ಬಿಡು

(ಈ ವಾಕ್ಯದ ಹೊಸಗನ್ನಡ ರೂಪ ಬರೆಯಿರಿ)

18) ಭೀಕರ ಹೋರಾಟ ನಡೆಯಿತು

(ಈ ವಾಕ್ಯಕ್ಕೆ ವಿರುದ್ಧರ್ಥಕವಾಕ್ಯ ಬರೆಯಿರಿ)

19) ಸ್ವಾತಂತ್ರ್ಯ ಹೋರಾಟದಲ್ಲಿ ಪುರುಷರು ಪಾಲ್ಗೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಸ್ತ್ರೀಯರು ಪಾಲ್ಗೊಂಡರು.

(ಈ ವಾಕ್ಯವನ್ನು ಸಂಯುಕ್ತವಾಕ್ಯದಲ್ಲಿ ಬರೆಯಿರಿ)

20) ಲತ ಚೆನ್ನಾಗಿ ಓದಿದಳು. ಲತ ಹೆಚ್ಚು ಅಂಕಗಳು ಗಳಿಸಲಿಲ್ಲ
(ಮೇಲಿನ ವಾಕ್ಯವನ್ನು ಮಿಶ್ರ ವಾಕ್ಯದಲ್ಲಿ ಬರೆಯಿರಿ)

21) ರಾಮ ರಾವಣನನ್ನು ಕೊಂದನು
(ಈ ವಾಕ್ಯಕ್ಕೆ ಕರ್ಮಣಿ ವಾಕ್ಯ ಬರೆಯಿರಿ)

22) ರಾಜರ ಕಾಲದಲ್ಲಿ ದಿವಾನರು ಮುಖ್ಯ ಅಧಿಕಾರಿಯಾಗಿದ್ದರು
(ಗೆರೆ ಎಳೆದ ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ ಬರೆಯಿರಿ)

23) ಸಮಯವನ್ನು ವೃಥಾ ಮಾಡಬೇಡಿ
(ಇದು ಎಂತಹ ವಾಕ್ಯ ಬರೆಯಿರಿ)

24) ನಿನ್ನ ವಯಸ್ಸು ಎಷ್ಟು?
(ಇದು ಎಂತಹ ವಾಕ್ಯ ಬರೆಯಿರಿ)

25) ಸಂಭಾವನಾರ್ಥಕ ವಾಕ್ಯಕ್ಕೆ ಉದಾಹರಣೆ ಬರೆಯಿರಿ

ವಿಭಾಗ – II (20 ಅಂಕಗಳು)

ಸಂವೇದನಾಶೀಲತೆ (ಸುನ್ನಿತತ್ವ)

ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ 2*8=16

26) ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ
8 ಅಂಕಗಳು

(ಅಥವಾ)

ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ? ವಿವರಿಸಿರಿ

27) ಸೂರ್ಯಮಿತ್ರನು ತಮ್ಮ ಮಾವನೆಂದು ತಿಳಿದಾಗ ಅಗ್ನಿ ಭೂತಿ ವಾಯು ಭೂತಿಯರಲ್ಲಿ ಮೂಡಿದ ಭಾವನೆಗಳೇನು? ವಿವರಿಸಿ 8 ಅಂಕಗಳು

(ಅಥವಾ)

ಕನ್ನಡ ಭಾಷೆ ಸಮೃದ್ಧವಾಗಿ ರೂಪಗೊಂಡ ಬಗೆ ಹೇಗೆ? ವಿವರಿಸಿ

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 2*2=4

28) 'ಮಾರಿ ಗೌತಣವಾಯ್ತು ನಾಳೀನ ಭಾರತವು'
(ಮೇಲಿನ ವಾಕ್ಯದಲ್ಲಿನ ಅಲಂಕಾರವನ್ನು ಗುರ್ತಿಸಿ ಬರೆಯಿರಿ)

29) ಎನ್ನಣುಗಾಳ ನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರುಳ್ಳನ್ನೆಮ್
(ಮೇಲಿನ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ)

ವಿಭಾಗ – III (20 ಅಂಕಗಳು)

ಸೃಜನಾತ್ಮಕತೆ

ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ 2*8=16 ಅಂಕಗಳು

30) 'ಸ್ವಚ್ಛಭಾರತ ಅಭಿಯಾನ' ಕುರಿತು ಪ್ರಬಂಧ ಬರೆಯಿರಿ

(ಅಥವಾ)

ಪ್ರಧಾನೋಪಾಧ್ಯಾರಿಗೆ ಅಕ್ಕನ ಮದುವೆಗಾಗಿ 3ದಿನ ರಜೆ ಕೋರುತ್ತಾ ಪತ್ರ ಬರೆಯಿರಿ

31) ವಸಂತ ಮುಖ ತೋರಲಿಲ್ಲ ಪೂರಕ ಪಾಠದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

(ಅಥವಾ)

'ವಚನಗಳು' ಪೂರಕ ಪಾಠದ ಸಾರಾಂಶವನ್ನು ಬರೆಯಿರಿ

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 2*2=4 ಅಂಕಗಳು

32) ಸೀತೆಯು ವನದಲ್ಲಿ ಕಂಬನಿ ಸುರಿಸಿದಳು

(ಮೇಲಿನ ವಾಕ್ಯದಲ್ಲಿನ ನುಡಿಗಟ್ಟನ್ನು ಗಿರ್ತಿಸಿ ಬರೆಯಿರಿ)

33) 'ಗಾಳಿಮಾತು' – ಈ ನುಡಿಗಟ್ಟನ್ನು ಯಾವ ಸಂದರ್ಭದಲ್ಲಿ ಬಳಸುವರು ಬರೆಯಿರಿ

****

BLUE PRINT & MODEL PAPERS OF SSC PUBLIC EXAMINATIONS FOR THE ACADEMIC YEAR 2026-27
BY THE DIRECTOR OF GOVERNMENT EXAMINATIONS (SSC BOARD), AP

01 K & 02K

KANNADA (FIRST LAUNGUAGE)

ಕನ್ನಡ(ಪ್ರಥಮ ಭಾಷೆ)

ಮಾದರಿ ಪ್ರಶ್ನೆ ಪತ್ರಿಕೆ–2: 2026–27

ಸಮಯ: 3ಗಂಟೆ 15 ನಿ॥ ಗರಿಷ್ಠ ಅಂಕಗಳು:100

ವಿದ್ಯಾರ್ಥಿಗಳಿಗೆ ಸೂಚನೆಗಳು

1) ಪ್ರಶ್ನೆಪತ್ರಿಕೆಯಲ್ಲಿ ಮೂರು ವಿಭಾಗಗಳು ಇರುತ್ತವೆ
2) ಪ್ರಶ್ನೆಪತ್ರಿಕೆ ಓದುವುದಕ್ಕೆ 15ನಿಮಿಷಗಳು, ಉತ್ತರ ಬರೆಯುದಕ್ಕೆ 3ಗಂಟೆ ಸಮಯ ಇರುತ್ತದೆ
3) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಉತ್ತರ ಪತ್ರಿಕೆಯಲ್ಲಿಯೇ ಬರೆಯಬೇಕು
4) ಉತ್ತರಗಳು ದುಂಡಾಗಿ, ಸ್ಪಷ್ಟವಾಗಿ ಬರಯಬೇಕು

ವಿಭಾಗ– I

1) ಈ ಕೆಳಗಿನ ಪರಿಚಿತ ಪದ್ಯಗಳಲ್ಲಿ ಒಂದಕ್ಕೆ ಪ್ರತಿಪದಾರ್ಥ ಬರೆಯಿರಿ 8 ಅಂಕಗಳು

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

(ಅಥವಾ)

ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುದಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು

2) ಕೆಳಗಿನ ಪರಿಚಿತ ಗದ್ಯವನ್ನು ಓದಿ ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 8 ಅಂಕಗಳು

ಭೂಮಿಯಲ್ಲಿ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಎಂದಾದರೂ ಫಲ ಕೊಟ್ಟೇ ಕೊಡುತ್ತದೆ. ಲೇಖಕರಿಗೆ ಕವಿ ಸಿದ್ದಲಿಂಗಯ್ಯನವರು ಮನೆಮಂಚಮ್ಮ ಎನ್ನುವ ಗ್ರಾಮ ದೇವತೆಯ ಕತೆಯನ್ನು ಹೇಳಿರುತ್ತಾರೆ. ಒಮ್ಮೆ ಗ್ರಾಮಸ್ಥರೆಲ್ಲರೂ ತಮ್ಮ ದೇವತೆಯ ಗುಡಿಯನ್ನು ಕಟ್ಟಲು ತೊಡಗುತ್ತಾರೆ. ಗುಡಿಚಾವಣಿ ಮಟ್ಟಕ್ಕೆ ಬಂದಾಗ ಮಂಚಮ್ಮ ದೇವತೆ ಒಬ್ಬನ ಮೈಮೇಲೆ ಆವಾಹಿತಳಾಗಿ ಕೆಲಸ ನಿಲ್ಲಿಸುವಂತೆ ಆರ್ಭಟಿಸುತ್ತಾಳೆ. ಆಗ ಗಾಭರಿಯಾಗಿ ಕೆಲಸವನ್ನು ನಿಲ್ಲಿಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಾರೆ. ಆಗದೇವತೆ ಏನು ಮಾಡುತ್ತಿದ್ದೀರಿ ಎಂದು ಕೇಳುತ್ತಾಳೆ ನಿನಗಾಗಿ ಮನೆಕಟ್ಟುತ್ತಿದ್ದೇವೆ ಎಂದಾಗ ನಿಮಗೆಲ್ಲರಿಗೆ ಮನೆಯಿದೆಯೇ ಎಂದಾಗ ಇಲ್ಲ ಎಂದಕ್ಕೆ ಎಲ್ಲರಿಗೂ ಮನೆ ಆಗುವವರೆಗೂ ತನಗೂ ಮನೆ ಬೇಡವೆಂದು ಹೇಳಿ ಮನೆ ಮಂಚಮ್ಮನಾಗುತ್ತಾಳೆ.

ಪಶ್ನೆಗಳು

ಅ) ಇಂದಲ್ಲ – ನಾಳೆ ಫಲ ಕೊಡುವ ಅಂಶಗಳಾವುವು?

ಆ) ಮನೆಮಂಚಮ್ಮ ಯಾರು?
ಇ) ಮನೆಮಂಚಮ್ಮನ ಕತೆ ಹೇಳಿದ ಕವಿಯಾರು?
ಈ) ಈ ಗದ್ಯದ ಆಧಾರವಾಗಿ ಒಂದು ಪ್ರಶ್ನೆಯನ್ನು ತಯಾರಿಸಿ

3) ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ 8 ಅಂಕಗಳು

ಅ) ಯೋಗಾಂಗ ತ್ರಿವಿಧಿ ಸೃಷ್ಟಿವಚನ ಮತ್ತು ಮಂತ್ರಗೋಪ್ಯ ಮೊದಲಾದ ಲಘು ಕೃತಿಗಳನ್ನು ರಚಿಸಿದ್ದಾಳೆ
ಆ) ಅಕ್ಕನ ವಚನಗಳ ಅಂಕಿತ ಹಾಗೂ ಆರಾಧ್ಯ ಧೈವ ಚೆನ್ನಮಲ್ಲಿಕಾರ್ಜುನ
ಇ) ಈಕೆಯ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿ
ಈ) ಅಕ್ಕಮಹಾದೇವಿಯ ಕಾಲ ಸಾ.ಶ ಸುಮಾರು 1160 (12ನೇ ಶತಮಾನ)

ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿರಿ 3*4=12ಅಂಕ

4) 'ವೀರಲವ' ಪದ್ಯಭಾಗದಿಂದ ಲಕ್ಷ್ಮೀಶ ಕವಿಯ ಪರಿಚಯ ಮಾಡಿರಿ

5) ಟೋಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಕಲಿಸಿದ್ದಾರೆ?

6) ಮುದ್ದಣ್ಣ ಕವಿ ಲೇಖಕರಿಗೆ ಏನೆಂದು ಸಲಹೆಕೊಟ್ಟರು?

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 5*2=10ಅಂಕ

7) ಅ) ಕುಂಪಣಿ ಸರ್ಕಾರ ಭಾರತೀಯರಿಗೆ **ಹುಕುಂ** ಹೊರಡಿಸಿತು 2*1=2 ಅಂಕ
(ಗೆರೆ ಎಳೆದ ಪದಕ್ಕೆ ಸರಿಯಾದ ಅರ್ಥ ಗುರ್ತಿಸಿ ಬರೆಯಿರಿ)
ಅ) ಸರ್ಕಾರ ಆ) ಸರದಾರ ಇ) ಆದೇಶ ಈ) ಕುಂಪಣಿ

ಆ) ಕಛೇರಿಗಳಲ್ಲಿ **ಕಾರಕೂನರ** ಅಗತ್ಯ ಇರುತ್ತದೆ
(ಗೆರೆ ಎಳೆದ ಪದಕ್ಕೆ ಸರಿಯಾದ ಅರ್ಥ ಗುರ್ತಿಸಿ)
ಅ) ಅಧಿಕಾರಿ ಆ) ಮಂತ್ರಿ ಇ) ಗುಮಾಸ್ತ ಈ) ಕೂಲಿ

8) ಅ) ಮಕ್ಕಳ **ರೋಧನ** ಹೇಳತೀರದು 2*1=2 ಅಂಕ
(ಗೆರೆ ಎಳೆದ ಪದಕ್ಕೆ ಸರಿಯಾದ ಸಮಾನಾರ್ಥಕ ಪದಗಳು ಗುರ್ತಿಸಿ)
ಅ) ಅಳುವು, ದುಃಖ ಆ) ನಗು, ಸಂತೋಷ ಇ) ದುಃಖ, ಸುಕ ಈ) ನಗುವು,ಅಳುವು

ಆ) ಹಸಿರು **ಇಳೆ**ಯ ಉಸಿರು
(ಗೆರೆ ಎಳೆದ ಪದಕ್ಕೆ ಸಿರಿಯಾದ ಸಮಾನಾಥಕ ಪದಗಳು ಗುರ್ತಿಸಿ)
ಅ) ಧರೆ, ಕಾಡು ಆ) ಭೂಮಿ, ಧರೆ ಇ) ಬಾನು, ಭೂಮಿ ಈ) ಆಕಾಶ, ಭೂಮಿ

9) ಅ) 'ಸೀತೆಯನ್ನು ಸರ್ವಜನ **ಬಂಜೆ**ಯನ್ನದಿರ್ದಪುದೇ' 2*1=2 ಅಂಕ
(ಗೆರೆಎಳೆದ ಪದಕ್ಕೆ ಸರಿಯಾದ ತತ್ಸಮ ಪದ ಗುರ್ತಿಸಿ ಬರೆಯಿರಿ)
ಅ) ವದ ಆ) ಬಜೆ ಇ) ವಂಧ್ಯ ಈ) ಯಮ

ಆ) ವಿದೇಶಗಳಲ್ಲಿ **ವರ್ಣ**ಬೇದ ಸಮರವಿದೆ
(ಗೆರೆ ಎಳೆದ ಪದಕ್ಕೆ ತದ್ಭವರೂಪ ಗುರ್ತಿಸಿರಿ)
ಅ) ಅಣ್ಣ ಆ) ವರುಣ ಇ) ವರ್ಣನೆ ಈ) ಅಕ್ಷರ

10) ಅ) **'ಕರಿ** ನುಂಗಿದ ಬೆಳವಿನ ಹಣ್ಣಿನಂತೆ' 2*1=2 ಅಂಕ

(ಗೆರೆ ಎಳೆದ ಪದಕ್ಕೆ ನಾನರ್ಥಗಳು ಗುರ್ತಿಸಿ ಬರೆಯಿರಿ)

ಅ) ಆನೆ, ಒಂಟೆ ಆ) ಹುಲಿ, ಕುರಿ ಇ) ಹುಲಿ, ಆನೆ ಈ) ಆನೆ ಕಪ್ಪು ಬಣ್ಣ

ಆ) ನಾವು **ಕಾಡ**ನ್ನು ರಕ್ಷಿಸಬೇಕು

(ಗೆರೆ ಎಳೆದ ಪದಕ್ಕೆ ಸರಿಯಾದ ನಾನರ್ಥಗಳು ಗುರ್ತಿಸಿ ಬರೆಯಿರಿ)

ಅ) ಅರಣ್ಯ, ಪೀಡಿಸು ಆ) ಹೊಲ, ತೋಟ ಇ) ಕಾಡು, ಅರಣ್ಯ ಈ) ಅರಣ್ಯ, ದಂಡೆ

11) ಅ) ಬೆಕ್ಕು ಇಲಿಯನ್ನು ಹಿಡಿಯಲು ಮೆಲ್ಲಮೆಲ್ಲನೆ ಹೋಗುತ್ತದೆ 2*1=2 ಅಂಕ

(ದ್ವಿರುಕ್ತಿ ಪದವನ್ನು ಗುರ್ತಿಸಿ ಬರೆಯಿರಿ)

ಅ) ಮೆಲ್ಲ ಮೆಲ್ಲನೆ ಆ) ಹಿಡಿಯಲು ಇ) ಬೆಕ್ಕು ಈ) ಇಲಿಯನ್ನು

ಆ) ಊಟದಲ್ಲಿ ಕೆನೆಮೊಸರು ಇದ್ದರೆ ಬಹಳ ರುಚಿ

(ಗೆರೆ ಎಳೆದ ಪದವನ್ನು ಗುರ್ತಿಸಿ ಬರೆಯಿರಿ)

ಅ) ದ್ವಿರುಕ್ತಿ ಆ) ಪ್ರತ್ಯಯ ಇ) ಜೋಡುನುಡಿ ಈ) ಉಕ್ತಿ

ಈ ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 5*1=5 ಅಂಕ

12) **ದೇವೇಂದ್ರ** ಸ್ವರ್ಗಾಧಿಪತಿ

(ಗೆರೆ ಎಳೆದ ಪದವನ್ನು ಬಿಡಿಸಿ ಗುರ್ತಿಸಿ ಬರೆಯಿರಿ)

ಅ) ದೇವ + ಇಂದ್ರ ಆ) ದೆವ + ಇಂದ್ರ ಇ) ಇಂದ್ರ + ದೇವ ಈ) ದೇ + ವೇಂದ್ರ

13) ಕೆಳಗಿನ ಪದಗಳಲ್ಲಿ ಲೋಪಸಂಧಿಗೆ ಸೇರಿದ ಪದವನ್ನು ಗುರ್ತಿಸಿರಿ

ಅ) ಮರವನ್ನು ಆ) ಬಲ್ಲೆನೆಂದು ಇ) ಮಳೆಗಾಲ ಈ) ದೇವೆಂದ್ರ

14) **ಅತ್ಯಂತ** ಪ್ರತಿಭಾವಂತರಿಗೆ ಸರ್ಕಾರ ಪುರಸ್ಕಾರ ನೀಡುತ್ತದೆ

(ಗೆರೆಎಳೆದ ಪದ ಯಾವಸಂಧಿ ಗುರ್ತಿಸಿ ಬರೆಯಿರಿ)

ಅ) ಗುಣಸಂಧಿ ಆ) ಯಣ್‌ಸಂಧಿ ಇ) ಲೋಪಸಂಧಿ ಈ) ವೃದ್ಧಿಸಂಧಿ

15) ಬಿಸಿಲಲ್ಲಿ ತಿರುಗಿದಾಗ **ತಲೆನೋವು** ಬರುತ್ತದೆ

(ಗೆರೆ ಎಳೆದ ಪದಕ್ಕೆ ವಿಗ್ರಹ ವಾಕ್ಯ ಗುರ್ತಿಸಿ ಬರೆಯಿರಿ)

ಅ) ತಲೆಯಲ್ಲಿ+ನೋವು ಆ) ಮೈಯಲ್ಲಿ+ನೋವು ಇ) ನೋವು+ಇಲ್ಲ ಈ) ತಲೆಕೆಳಗೆ+ನೋವು

16) ಸಿಟ್ಟಲೆ **ಮುಂಗೈ** ಕಟ್ಟನೆ ಕಡುಕೊಂಡ

(ಗೆರೆ ಎಳೆದ ಪದ ಯಾವ ಸಮಾಸ ಗುರ್ತಿಸಿರಿ)

ಅ) ದ್ವಂದ್ವ ಸಮಾಸ ಆ) ದ್ವಿಗು ಸಮಾಸ ಇ) ಕ್ರಿಯಾಸಮಾಸ ಈ) ಅಂಶಿ ಸಮಾಸ

ಈ ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 9*1=9 ಅಂಕ

17) 'ನಿನ್ನಪದೆಸೆಯ ಬಯಸುವನಲ್ಲ'

(ಈ ವಾಕ್ಯಕ್ಕೆ ಸರಿಯಾದ ಹೊಸಗನ್ನಡ ರೂಪ ಬರೆಯಿರಿ)

18) ನಮ್ಮ ಶಾಲೆಯಲ್ಲಿ ನಾಟಕ ಪ್ರದರ್ಶನ ಜರುಗಿದೆ
(ಈ ವಾಕ್ಯಕ್ಕೆ ವಿರುದ್ಧರ್ಥಕವಾಕ್ಯ ಬರೆಯಿರಿ)

19) ರಾಮನು ಮಾರುಕಟ್ಟೆಗೆ ಹೋದನು. ತರಕಾರಿಗಳು ಇರಲಿಲ್ಲ
(ಈ ವಾಕ್ಯವನ್ನು ಸಂಯುಕ್ತ ವಾಕ್ಯದಲ್ಲಿ ಬರೆಯಿರಿ)

20) 'ರೈತರು ಹೊಲದಲ್ಲಿ ಊಳುತ್ತಾರೆ' ಅಲ್ಲಿ ಮಳೆ ಸುರಿಯಲಿಲ್ಲ
(ಈ ಸಾಮಾನ್ಯ ವಾಕ್ಯಗಳನ್ನು ಮಿಶ್ರ ವಾಕ್ಯವಾಗಿ ಬದಲಿಸಿ ಬರೆಯಿರಿ)

21) ಅಕ್ಕ ತಂಗಿಯನ್ನು ಕರೆದಳು
(ಈ ವಾಕ್ಯಕ್ಕೆ ಸರಿಯಾದ ಕರ್ಮಣಿ ವಾಕ್ಯ ಬರೆಯಿರಿ)

22) ಮೈಸೂರಿನಲ್ಲಿ ಮಹಾರಾಣಿಯವರು **ಕಾಲೇಜು** ತೆರೆದರು
(ಗೆರೆ ಎಳೆದ ಪದವು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ ಬರೆಯಿರಿ)

23) 'ದೇವರು ಅವನಿಗೆ ಒಳ್ಳೆಯದನ್ನು ಮಾಡಲಿ'
(ಇದು ಎಂತಹ ವಾಕ್ಯ ಬರೆಯಿರಿ)

24) ನಿಮ್ಮ ಊರು ಯಾವುದು?
(ಇದು ಎಂತಹ ವಾಕ್ಯ ಬರೆಯಿರಿ)

25) ವಿದ್ಯಾರ್ಥಕ ವಾಕ್ಯಕ್ಕೆ ಉದಾಹರಣೆ ಬರೆಯಿರಿ

ವಿಭಾಗ – II

20 ಅಂಕಗಳು

ಸಂವೇದನಾಶೀಲತೆ(ಸುನ್ನಿತತ್ವ)

ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಬರೆಯಿರಿ — 2*8=16 ಅಂಕಗಳು

26) ಲವನ ನಡುವಳಿಕೆ ಮೆಚ್ಚುಗೆಯಾಯಿತೇ ಏಕೆ? ವಿವರಿಸಿ

(ಅಥವಾ)

'ಹಸುರು ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ

27) 'ವೆಸ್ಟ್ ಮಿನಿಷ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ

(ಅಥವಾ)

ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ — 2*2=4 ಅಂಕ

28) 'ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು — 2
(ಮೇಲಿನ ವಾಕ್ಯದಲ್ಲಿನ ಅಲಂಕಾರ ಗುರ್ತಿಸಿ ಹೆಸರು ಬರೆಯಿರಿ)

29) ಒಡೆಯಲ ಜಾಂಡಂ ಕುಲಗಿರಿ — 2
ಕಡೆಯಲ್ ನಡುಗಲ್ಕೆಧಾತ್ರಿ ದಿವಿಜರ್ ಸೆಡೆಯಾ
(ಗುರು ಲಘುಗಳ ಗುರ್ತಿಸಿ ಗಣ ವಿಭಜನೆಮಾಡಿ ಪದ್ಯದ ಹೆಸರು ಬರೆಯಿರಿ)

ವಿಭಾಗ – III

20 ಅಂಕಗಳು

ಸೃಜನಾತ್ಮಕತೆ

ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ 2*8=16 ಅಂಕಗಳು

30) ಮಾತೇ ಮುತ್ತು ಮಾತೇ ಮೃತ್ಯು ಈ ಗಾದೆಯನ್ನು ವಿಸ್ತರಿಸಿ ಬರೆಯಿರಿ

(ಅಥವಾ)

ವರ್ಗಾವಣೆ ಪತ್ರವನ್ನು ಕೊಡುವಂತೆ ಕೇಳಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರವನ್ನು ಬರೆಯಿರಿ

31) ಜಲಿಯನ್ ವಾಲಾಬಾಗ್ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ? ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು? ವಿವರಿಸಿ

(ಅಥವಾ)

ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ? ಮತ್ತು ಗುರೂಪದೇಶ ಯಾರಿಗೆ ಮೆಚ್ಚುಗೆ ಯಾಗುವುದಿಲ್ಲ ತಿಳಿಸಿ

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ 2*2=4 ಅಂಕಗಳು

32) ಈ ವರ್ಷ ಸರಿಯಾಗಿ ಬೆಳೆಬರದಿದ್ದಕ್ಕೆ ರೈತರು ಕಂಗಾಲ ಆದರು 2

(ಈ ವಾಕ್ಯದಲ್ಲಿನ ನುಡಿಗಟ್ಟನ್ನು ಗುರ್ತಿಸಿ ಬರೆಯಿರಿ)

33) 'ಕಂಬನಿ' ಈ ನುಡಿಗಟ್ಟನ್ನು ಅರ್ಥೈಸಿ ಯಾವ ಸಂದರ್ಭದಲ್ಲಿ ಉಪಯೋಗಿಸುತ್ತಾರೆ ಬರೆಯಿರಿ 2

****